**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.117/2022**

| | | |
|---|---|---|
| ಸಾಕ್ಷಿದಾರರ ಹೆಸರು | : ರವಿ ಜಿ.ಎ. | ಫ್ರಾಸಾ-2 |
| ತಂದೆಯ ಹೆಸರು | : ಅಣ್ಣಪ್ಪ | ಚಾಸಾ-24 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ13.11.2025 |
| ವಾಸಸ್ಥಳ | : ಆಲ್ದೂರು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.18.01.2019 ರಿಂದ ದಿ.04.06.2022 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.18.01.2022 ರಂದು ಚಾಸಾ-25 ರವರು ನೀಡಿದ ಜ್ಞಾಪನವನ್ನು ಸ್ವೀಕರಿಸಿಕೊಂಡು ಬೆ.8.30 ರ ಸಮಯಕ್ಕೆ ನಾನು ಚಾಸಾ-22 ಮತ್ತು 23 ರವರ ಬೆಂಗಾವಲಿನಲ್ಲಿ 2 ನೇ ಆರೋಪಿಯನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಚಾಮರಾಜನಗರಕ್ಕೆ ಹೋಗಿ KA-01-MB-0273 ವಾಹನದ ಬಗ್ಗೆ ವಿಚಾರಿಸಿದಾಗ ಸದರಿ ವಾಹನದ ಆರ್.ಸಿ.ಮಾಲೀಕರಾದ ಮಹದೇವಸ್ವಾಮಿ ರವರು ಅನಾರೋಗ್ಯದ ಕಾರಣ ಚಾಮರಾಜನಗರದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಸಂಬಂಧಿಕರಾದ ಚಾಸಾ-10 ರವರು KA-01-MB-0273 ರ ನೋಂದಣಿ ಸಂಖ್ಯೆಯ ಕಪ್ಪು ಬಣ್ಣದ ಚವರ್ ಲೆಟ್ ಕಾರನ್ನು ಚಾಮರಾಜನಗರ ಗ್ರಾಮಾಂತರ ಪೋಲಿಸ್ ಠಾಣೆ ಮುಂಭಾಗ ತಂದು ಹಾಜರುಪಡಿಸಿದ್ದು, ಆ ಸಮಯಕ್ಕೆ ಅಲ್ಲಿಯೇ ಹಾಜರುಸಿಕ್ಕ ಚಾಸಾ-8 ಮತ್ತು 9 ರವರನ್ನು ಪಂಚರನ್ನಾಗಿಸಿಕೊಂಡು ಅವರ ಸಮಕ್ಷಮ ಮ.3.15 ರಿಂದ 4.00 ರವರೆಗೂ ಮಹಜರ್ ಮುಖೇನ ವಶಕ್ಕೆ ಪಡೆದು ಫೋಟೋಗಳನ್ನು ತೆಗೆಸಿರುತ್ತೇನೆ. ನಂತರ ವಶಕ್ಕೆ ಪಡೆದ ವಾಹನವನ್ನು ಚಾಸಾ-22 ರವರಿಂದ ಚಾಲನೆ ಮಾಡಿಸಿಕೊಂಡು ರಾ.9.55 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣಾ ಆವರಣಕ್ಕೆ ತಂದು ನಿಲ್ಲಿಸಿ 2 ನೇ ಆರೋಪಿಯನ್ನು ಠಾಣಾ ಬಂಧಿಖಾನೆಯಲ್ಲಿ ಇರಿಸಿ ಚಾಸಾ-25 ರವರಿಗೆ ವರದಿ ನೀಡಿರುತ್ತೇನೆ.

ಸಾಕ್ಷಿಯು ದಿ.18.02.2024 ರ ಮಹಜರ್ ಮತ್ತು ಎರಡು ಫೋಟೋಗಳನ್ನು ನೋಡಿ ಗುರುತಿಸಿ, ಫೋಟೋಗಳಲ್ಲಿ ಕಾಣುವ ವಾಹನವನ್ನು ವಶಕ್ಕೆ ಪಡೆದ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-17, ಸಾಕ್ಷಿಯ ಸಹಿಯನ್ನು ನಿಪಿ-17(ಎ), ಫೋಟೋಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.18.01.2022 ರ ಜ್ಞಾಪನ ಮತ್ತು ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-20 ಮತ್ತು 21, ಸಾಕ್ಷಿಯ ಸಹಿಗಳನ್ನು ನಿಪಿ-20(ಎ) ಮತ್ತು 21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಕೆ.ಡಿ. ವಕೀಲರಿಂದಃ**

ದಿ.18.01.2022 ರಂದು ಮಹದೇವಸ್ವಾಮಿ ರವರು ಆಸ್ಪತ್ರೆಗೆ ದಾಖಲಾಗಿದ್ದ ಕಾರಣ ಅವರ

ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿಲ್ಲ. ನಿಪಿ-18 ಮತ್ತು 19 ರ ಫೋಟೋಗಳನ್ನು ಇಲಾಖಾ ಚಾಲಕ ಸಿಬ್ಬಂದಿ ಮೊಬೈಲ್ ನಲ್ಲಿ ತೆಗೆದಿದ್ದಾರೆ. ಈ ವಿಚಾರವನ್ನು ನಿಪಿ-17 ರ ಮಹಜರ್ ನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ನಾನು ಹೇಳಿದಂತೆ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಾಹನವನ್ನು ವಶಕ್ಕೆ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-17 ರಿಂದ 21 ರ ದಾಖಲೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.